ಊ) ಜೋಯಿಡಾ ಮತ್ತು ಹಳಿಯಾಳ ತಾಲ್ಲೂಕುಗಳು ಅರಣ್ಯ ಪ್ರದೇಶದಿಂದ ಕೂಡಿದ್ದು, ಇಲ್ಲಿ ಓದುವ ಐ.ಟಿ.ಐ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇದುವರಿವಿಗೂ ವಿದ್ಯಾರ್ಥಿ ನಿಲಯ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಯು ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಬಂದಿರುವುದಿಲ್ಲ.

So far no proposal has been received from Govrnment Industrial Training Institute to start hostel.

ಋ) ಹಾಗಿದ್ದಲ್ಲಿ ವಿದ್ಯಾರ್ಥಿ ನಿಲಯವನ್ನು ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರಗಳನ್ನು ನೀಡುವುದು).

ವಿದ್ಯಾರ್ಥಿ ನಿಲಯ ನಿರ್ಮಿಸಲು ಬೇಡಿಕೆ ಬಂದಲ್ಲಿ ಮುಂದೆ ಪರಿಶೀಲಿಸಲಾಗುವುದು.

If proposal is received to establish hostel, it will be examined.

ಸಂಖ್ಯೆ: ಕಾಇ 08 ಇಟಿಎ 2009

(ಬಿ.ಎನ್. ಬಚ್ಚೇಗೌಡ)
ಮಾನ್ಯ ಕಾರ್ಮಿಕ ಸಚಿವರು.

<u>ವಿಧಾನ ಸಭೆ</u>

114 ಶ್ರೀ.ಸುನೀಲ್.ವಿ.ಹೆಗಡೆ

ಕುಣಬಿ ಹಾಗೂ ಗೌಳಿ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದು.
ಸಮಾಜ ಕಲ್ಯಾಣ ಸಚಿವರು.

ಅ) ಹಿಂದುಳಿದ ಬುಡಕಟ್ಟು ಜನಾಂಗಗಳಾದ ಕುಣಬಿ ಹಾಗೂ ಗೌಳಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಹೌದು

ಆ) ಹಾಗಿದ್ದಲ್ಲಿ, ಈ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಯಾವಾಗ ಸೇರಿಸಲಾಗುವುದು;

ಇ) ಈ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು; (ವಿವರ ನೀಡುವುದು);

ಭಾರತ ಸಂವಿಧಾನ ಅನುಚ್ಛೇದ 342ರ ಪ್ರಕಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಯಾವುದೇ ಜಾತಿ/ಜನಾಂಗವನ್ನು ಸೇರಿಸುವ ಅಥವಾ ತೆಗೆದು ಹಾಕುವ ಅಧಿಕಾರ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಯಾವುದೇ ಜನಾಂಗವನ್ನು ಪರಿಶಿಷ್ಟ ಪಟ್ಟಿಗೆ ಸೇರಿಸುವ ಮುನ್ನ ಆ ಜನಾಂಗದ ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳಬೇಕಾಗುತ್ತದೆ ಕುಲ ಶಾಸ್ತ್ರೀಯ ಅಧ್ಯಯನ ವರದಿ ಆಧಾರದ ಮೇಲೆ ಆ ಜನಾಂಗ ಪರಿಶಿಷ್ಟ ಪಂಗಡಗಳ ಗುಣಲಕ್ಷಣಗಳನ್ನು ಹೊಂದಿರುವುದಾಗಿ

ಕಂಡು ಬಂದಲ್ಲಿ ರಾಜ್ಯದ ಸಚಿವ ಸಂಪುಟದ ಅನುಮೋದನೆಯೊಂದಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗುತ್ತದೆ.

ಕುಣಬಿ ಜನಾಂಗದವರ ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳುವುದರ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಗೋವಾ ರಾಜ್ಯದಲ್ಲಿ ಈ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಈ ಮೇಲೆ (ಅ) ಮತ್ತು (ಇ)ನಲ್ಲಿ ವಿವರಿಸಲಾಗಿದೆ.

(ಸಕಇ 27 ಎಸ್‌ಎಡಿ 2009)

(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು.

ವಿಧಾನ ಸಭೆ

116 ಶ್ರೀ.ಅಮರೇಶ್
ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಯುವುದು.
ಸಮಾಜ ಕಲ್ಯಾಣ ಸಚಿವರು

ಅ) ಮುಳಬಾಗಿಲು ತಾಲ್ಲೂಕಿಗೆ 2007–08 ಹಾಗೂ 2008–09ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಲ್ಲಿ ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು);

ಗಂಗಾ ಕಲ್ಯಾಣ ಯೋಜನೆಯಡಿ ಮುಳಬಾಗಿಲು ತಾಲ್ಲೂಕಿಗೆ ಮಂಜೂರಾದ ಕೊಳವೆ ಬಾವಿಗಳ ವಿವರ:–

ಕ್ರ ಸಂ	ನಿಗಮದ ಹೆಸರು	ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ	
		2007–08	2008–09
1	ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ	56	65
2	ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ	20	12
3	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ	14	12